**ಸಿ.ಸಿ ನಂ. 28/15**

**ಪಿ.ಡಬ್ಲ್ಯೂ- 3**

**ದಿನಾಂಕಃ 22.09.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.**

ಪಿರ್ಯಾದಿ 2 ವರ್ಷಗಳ ಕಾಲ ಕೆರೆಯೂರಿನಲ್ಲಿ ವಾಸ ಇದ್ದರು. ಪಿರ್ಯಾದಿ ಗಂಡ ಚಿಕ್ಕಕೆರೆಯೂರು ಗ್ರಾಮ ಪಂಚಾಯ್ತಿ ಸದಸ್ಯರಾಗಿದ್ದರು ಎಂದರೆ ಸರಿ. ನನ್ನ ಅಳಿಯ ಆ ಮನೆಯ ಹಿರಿಯ ಮಗನಾಗಿದ್ದರು ಎಂದರೆ 2 ನೇ ಮಗ ಎಂದು ನುಡಿಯುತ್ತಾರೆ. ಮನೆ ವ್ಯವಹಾರ ನನ್ನ ಅಳಿಯ ಮಹೇಶ್ ನೋಡಿಕೊಳ್ಳುತ್ತಿದ್ದರು ಎಂದರೆ ಗೊತ್ತಿಲ್ಲ. ಚಿಕ್ಕಕೆರೆಯೂರಿಗೆ ನಾನು 3 ಬಾರಿ ಅಂದರೆ 2007, 2014 ರಲ್ಲಿ 2 ಬಾರಿ ಹೋಗಿರುತ್ತೇನೆ. ಪಿರ್ಯಾದಿ ಮತ್ತು ಮಹೇಶಗೂ 2007 ರಲ್ಲಿ ಮದುವೆ ಆಗಿತ್ತು. 1 ನೇ ಆರೋಪಿ ನನ್ನ ಬೀಗರು ಎಂದರೆ ಸರಿ. ಆರೋಪಿ 2 ರಿಂದ 5 ರವರು ನನ್ನ ಬೀಗರ ಮಕ್ಕಳು ಎಂದರೆ ಸರಿ. ನನ್ನ ಮಗಳು ಅಳಿಯ ಮತ್ತು ಆರೋಪಿ 1 ರಿಂದ 5 ರವರು ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಎಂದರೆ ಸರಿ. ಯಾವುದೇ ವ್ಯವಹಾರ ಮಾಡಬೇಕಾದರೆ ಒಟ್ಟು ಕುಟುಂಬದಲ್ಲಿ ಮಾಡುತ್ತಿದ್ದರು ಎಂದರೆ ಸರಿ. ಮದುವೆಯಾದ ನಂತರ ನನ್ನ ಮಗಳು ಮತ್ತು ಅಳಿಯ ಹ್ಯಾಂಡ್ ಪೊಸ್ಟ ನ ನಂದೀಶ್ ಎಂಬುವವರ ಮನೆಯಲ್ಲಿ ವಾಸವಾಗಿದ್ದರು ಎಂದು ತೋರಿಸಲು ಪಿರ್ಯಾದಿ ರೇಷನ್ ಕಾರ್ಡ್ ಹಾಜರುಪಡಿಸಿರುತ್ತಾರೆ. ಸದರಿ ಮನೆಯ ಬಾಡಿಗೆ ಕರಾರು ಪತ್ರ ಅಥವಾ ಬೋಗ್ಯ ಪತ್ರ ನೋಡಿರುವುದಿಲ್ಲ. ಹ್ಯಾಂಡ್ ಪೊಸ್ಟ ನ ನಂದೀಶ್ ಎಂಬುವವರ ಮನೆಯಲ್ಲಿ ವಾಸವಾಗಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಳಿಯ ಚಾಲಕನಾಗಿದ್ದ. ವ್ಯವಸಾಯ ಮಾಡುತ್ತಿರಲಿಲ್ಲ. ವ್ಯವಸಾಯ ಮಾಡುತ್ತಿದ್ದರು ಮಾಡುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಳಿಯ ಚಾಲಕ ಎಂದು ಹೇಳಲು ಡಿ ಎಲ್ ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಚಾಲಕರಾಗಿ ಕೆಲಸ ಮಾಡಲು ಸಂಘದಲ್ಲಿ ನೋಂದಣಿ ಆಗಿರಬೇಕು ಎಂದರೆ ಗೊತ್ತಿಲ್ಲ. ವಿಂಗರ್, ಟ್ರಾಕ್ಟರ್, 2 ಹಿರೋ ಹೊಂಡಾ ನಂಬರ್ ಗೊತ್ತಾ ಎಂದರೆ ವಿಂಗರ್ ಸಂಖ್ಯೆ KA-45-6717 ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ಸದರಿ ವಾಹನಗಳಿಗೆ 1 ರಿಂದ 5 ಆರೋಪಿಗಳು ಮತ್ತು ವೇದಾಶ್ರೀ ಮಾಲೀಕರು

ಎಂದರೆ ಸರಿಯಲ್ಲ. ನನ್ನ ಅಳಿಯ ಮಹೇಶ ಮಾಲೀಕರು ಅಲ್ಲದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ04.01.2014 ರಂದು ನನ್ನ ಅಳಿಯ ಮೃತಪಟ್ಟಿರುತ್ತಾರೆ. ಯಾವ ಕಾರಣಕ್ಕೆ ಮೃತಪಟ್ಟಿರುತ್ತಾರೆ ಎಂದರೆ ಹಾರ್ಟ ಅಟ್ಯಾಕ್ ಯಿಂದ ಎಂದು ನುಡಿಯುತ್ತಾರೆ. ಆ ರೀತಿ ಹಾರ್ಟ ಅಟ್ಯಾಕ್ ಯಿಂದ ಮೃತಪಟ್ಟಿರುತ್ತಾರೆ ಎಂದು ಆಸ್ಪತ್ರೆಯಿಂದ ದಾಖಲೆ ಪಡೆದುಕೊಂಡಿಲ್ಲ. ನನ್ನ ಅಳಿಯನ ಸಾವಿಗೆ ಪಿರ್ಯಾಧಿಯೇ ಕಾರಣ ಆಗಿದ್ದು ಅದನ್ನು ಮುಚ್ಚಿ ಇಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ 1 ರಿಂದ 5 ಆರೋಪಿಗಳು ದೂರು ಕೊಡಲು ಮುಂದಾದಾಗ ನಾನು ಮಧ್ಯಸ್ಥಿಕೆ ವಹಿಸಿ ತಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗಳು ನನ್ನ ಅಳಿಯನ ಶವ ಸಂಸ್ಕಾರಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ದಿಃ10.03.2014 ರಲ್ಲಿ 1 ರಿಂದ 5 ನೇ ಆರೋಪಿಗಳು ಪಿರ್ಯಾಧಿ ಮನೆಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ, ನಾನು ಕಣ್ಣಾರೆ ನೋಡಿರುವುದಿಲ್ಲ. ಸದರಿ ಸಮಯದಲ್ಲಿ 5 ನೇ ಆರೋಪಿ ಮೈಸೂರು ನಲ್ಲಿ MSW ಓದುತ್ತಿದ್ದರು ಎಂದರೆ ಸರಿಯಲ್ಲ. ಸದರಿ ದಿನ ಆರೋಪಿತರು ಪಿರ್ಯಾಧಿ ಮನೆಗೆ ಅತಿಕ್ರಮ ಪ್ರವೇಶ ಮಾಡದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾಧಿಯಲ್ಲಿ ಯಾವುದೇ ಬೆದರಿಕೆ ಹಾಕಿರುವುದಿಲ್ಲ, ಸದರಿ ವಾಹನಗಳು ಆರೋಪಿಗಳ ಊರಾದ ಚಿಕ್ಕಕೆರೆಯೂರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ದಿಃ10.03.2014 ರ ಸಂಜೆ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ಇದೇ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ವಿಚಾರವನ್ನು ಫೋನ್ ಮೂಲಕ ಸದರಿ ವಿಚಾರವನ್ನು ತಿಳಿಸಿರುತ್ತಾರೆ ಎಂದು ಹೇಳಿದ್ದು ಯಾರ ಫೋನ್ ಎಂದರೆ ನನ್ನ ಮಗಳು ಬೇರೆಯವರ ಫೋನ್ ಮೂಲಕ ಕರೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಇದೇ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಚಾರ ತಿಳಿದ ನಂತರ ದೂರು ಕೊಡಲು ತೊಂದರೆ ಇತ್ತಾ ಎಂದರೆ ಚಿಕ್ಕಕೆರೆಯೂರಿಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಅಳಿಯನ ವಿಚಾರದಲ್ಲಿ ನನ್ನ ಮತ್ತು ನನ್ನ ಮಗಳ ವಿರುದ್ದ ದೂರು ಕೊಡುತ್ತಾರೆ ಎಂದು ನಾವು ದೂರು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಈ ರೀತಿ ಘಟನೆ ಆದರೆ ಹಳ್ಳಿಗಳಲ್ಲಿ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿ.

PW 2 ಮತ್ತು 4 ನನ್ನ ಸಂಬಂಧಿಕರು ಎಂದರೆ ಸರಿ. ಸದರಿ ದಿನ ನಾವು ಚಿಕ್ಕಕೆರೆಯೂರಿಗೆ ಹೋಗಿರುವುದಿಲ್ಲ ಮತ್ತು 1 ತಿಂಗಳ ಕಾಲಾವಕಾಶ ಕೊಟ್ಟಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ10.03.2014 ಬೆಳಿಗ್ಗೆ 10.30 ಕ್ಕೆ ಗಲಾಟೆ ಆಗಿರುತ್ತದೆ. ಸದರಿ ವಿಚಾರವಾಗಿ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆ ಯಾವ ಜಾಗದಲ್ಲಿ ನಡೆಯಿತು ಎಂದು ಗೊತ್ತಾ ಎಂದರೆ ಹ್ಯಾಂಡ್ ಪೋಸ್ಟ ನ ನಂದಿಶ ರವರ ಮನೆಯಲ್ಲಿ ಎಂದು ನುಡಿಯುತ್ತಾರೆ ಪಿರ್ಯಾಧಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾಧಿಗೆ ಹಲ್ಲೆ ಮಾಡಿರುವುದಿಲ್ಲ ಮತ್ತು ಆ ದಿನ ಯಾವುದೇ ಗಲಾಟೆ ಆಗದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾಹನಗಳನ್ನು ಕಬಳಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 1 ರವರ ಸಹೋದರರನ್ನು ನಡುವೆ ಇನ್ನೂ ಯಾವುದೇ ಭಾಗ ಆಗಿರುವುದಿಲ್ಲ, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ ಎಂದರೆ ಗೊತ್ತಿಲ್ಲ. OS 49/18 ರಲ್ಲಿ ಸಾಕ್ಷಿಯಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. OS 153/17 ರಲ್ಲಿ ಸಾಕ್ಷಿಯಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಗೊತ್ತಿಲ್ಲ. ಒಟ್ಟು ಕುಟುಂಬದ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**